ನವೆಂಬರ್ 08 , 2016

**“E” ಒಳಾಕ್ಷರವಿರುವ ಮಹಾತ್ಮಾ ಗಾಂಧಿ (ನೂತನ) ಶ್ರೇಣಿ -2005 ರಲ್ಲಿ ₹ 500 ರ ಬ್ಯಾಂಕು ನೋಟುಗಳ ನೀಡಿಕೆ**

ಭಾರತೀಯ ರಿಸರ್ವ್ ಬ್ಯಾಂಕಿನ ಗವರ್ನರ್ ಡಾ. ಉರ್ಜಿತ್ ಆರ್.ಪಟೇಲ್ ಅವರ ಸಹಿಯುಳ್ಳ, ಬ್ಯಾಂಕು ನೋಟಿನ ಹಿಂದೆ ಮುದ್ರಣ ವರ್ಷ 2016 ಹಾಗೂ ಸ್ವಚ್ಛ್ ಭಾರತ ಚಿನ್ಹೆಯನ್ನು ಮುದ್ರಿಸಿರುವ ಮತ್ತು ಎರಡೂ ಬದಿಯ ಸಂಖ್ಯಾಕಣಗಳಲ್ಲಿ “E” ಒಳಾಕ್ಷರವಿರುವ ಮಹಾತ್ಮಾ ಗಾಂಧಿ (ನೂತನ ) ಶ್ರೇಣಿ -2005 ರಲ್ಲಿ , ₹ 500 ರ ಬ್ಯಾಂಕು ನೋಟುಗಳನ್ನು ಶ್ರೀಘ್ರದಲ್ಲಿಯೇ ಭಾರತೀಯ ರಿಸರ್ವ್ ಬ್ಯಾಂಕ್ ಬಿಡುಗಡೆ ಮಾಡಲಿದೆ.







ಈ ಹೊಸ **₹ 500 ರ** ನೋಟುಗಳು ಬಣ್ಣ, ಗಾತ್ರ, ವಿಷಯ , ಭದ್ರತಾ ವೈಶಿಷ್ಟ್ಯಗಳ ಸ್ಥಾನ ಮತ್ತು ವಿನ್ಯಾಸದ ಅಂಶಗಳಲ್ಲಿ ಈ ಹಿಂದೆ ನೀಡಲಾದ ನಿಗದಿಪಡಿಸಿದ ಬ್ಯಾಂಕ್ ನೋಟುಗಳಿಗಿಂತ ಭಿನ್ನವಾಗಿರುತ್ತದೆ**.** ಈ ನೋಟಿನ ಮುಖ್ಯ ವೈಶಿಷ್ಟಗಳೆಂದರೆ -

1. ಗಾತ್ರ 66 ಮಿಮೀ * 150 ಮಿಮೀ
2. ಬಣ್ಣ ಕಲ್ಲು ಬೂದು
3. ಭಾರತೀಯ ಪರಂಪರೆಯ ಜಾಗವಾದ “ಕೆಂಪು ಕೋಟೆ “ ಯ ಚಿತ್ರವು ಭಾರತದ ಧ್ವಜದೊಂದಿಗೆ ನೋಟಿನ ಹಿಂಬದಿಯಲ್ಲಿದೆ.

ಬ್ಯಾಂಕ್ ನೋಟಿನಲ್ಲಿ ಇತರೆ ವೈಶಿಷ್ಟಗಳಿವೆ ( ಮಹಾತ್ಮ ಗಾಂಧಿಯ ಉಬ್ಬು ಮುದ್ರಣದ ಚಿತ್ರ , ಅಶೋಕ ಸ್ಥಂಭ ಲಾಂಛನ , ಬ್ಲೀಡ್ ರೇಖೆಗಳು , ಬಲಬದಿಯಲ್ಲಿ ₹ 500 ರ ಜೊತೆಗೆ ವೃತ್ತಾಕಾರವಿದೆ ಮತ್ತು ಗುರುತು ಚಿನ್ಹೆ ಇದೆ ). ಈ ವೈಶಿಷ್ಟ್ಯಗಳು ದೃಷ್ಟಿ ಹೀನರಿಗೆ ನೋಟಿನ ಮುಖಬೆಲೆಯನ್ನು ಪತ್ತೆ ಹಚ್ಚುವುದರಲ್ಲಿ ಸಹಾಯ ಮಾಡುತ್ತವೆ.

ಪತ್ರಿಕಾ ಪ್ರಕಟಣೆ : 2016-2017/1146

ಅಲ್ಪನ ಕಿಲಾವಲ
ಮುಖ್ಯ ಸಲಹೆಗಾರರು